International Journal of Kannada Research 2016; 2(3): 14-16




International Journal of Kannada Research
www.kannadajournal.com

ISSN: 2454–5813
IJSR 2016; 2(3): 14-16
© 2016 IJKS
www.kannadajournal.com
Received: 04-05-2016
Accepted: 05-06-2016

ಮಹೇಶ್ ಯು.ಸಿ
ಸಹಾಯಕ ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ
ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು,
ಚಿಕ್ಕಮಗಳೂರು 577102 ಕರ್ನಾಟಕ

\

Correspondence
ಮಹೇಶ್ ಯು.ಸಿ
ಸಹಾಯಕ ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ
ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು,
ಚಿಕ್ಕಮಗಳೂರು 577102 ಕರ್ನಾಟಕ

# ಮಲೆನಾಡಿನ ಸುಗ್ಗಿ ಹಬ್ಬದಲ್ಲಿ ಪ್ರಾದೇಶಿಕ ಸಾಮ್ಯತೆ ಮತ್ತು ಭಿನ್ನತೆ

**ಮಹೇಶ್ ಯು.ಸಿ**

ಸುಗ್ಗಿ ಹಬ್ಬ ಮಲೆನಾಡಿನ ಒಂದು ಪವಿತ್ರ ಹಬ್ಬ ಹಾಗೂ ನಂಬಿಕೆಯ ಹಬ್ಬ. ತಲೆಮಾರಿನಿಂದ ತಲೆಮಾರಿನವರೆಗೆ ಆಚರಿಸಿಕೊಂಡು ಬರುತ್ತಿರುವ ಈ ಹಬ್ಬ ಆಚರಣೆಯಲ್ಲಿ ಒಂದು ವಿಶಿಷ್ಟವಾದ ಕುರುಹುಗಳನ್ನು ಉಳಿಸಿಕೊಂಡು ಬಂದಿರುವ ಹಬ್ಬವಾಗಿದೆ. ಆದರೆ ಮಲೆನಾಡಿನ ಅನೇಕ ಗ್ರಾಮಗಳಲ್ಲಿ ಆಚರಿಸುವ ಈ ಆಚರಣೆಯಲ್ಲಿ ಅನೇಕ ಸಾಮ್ಯತೆ ಮತ್ತು ಭಿನ್ನತೆಗಳಿರುವುದನ್ನು ಗುರುತಿಸಬಹುದಾಗಿದೆ. ಪಾರಂಪರಿಕವಾಗಿ ಸಾಗಿ ಬಂದಿರುವ ಈ ಆಚರಣೆಯ ಹಿನ್ನಲೆ ಪ್ರಾದೇಶಿಕವಾಗಿ ಒಂದೇ ರೀತಿಯಲ್ಲಿ ಕಂಡು ಬಂದರೂ ಅವುಗಳ ಆಚರಣೆಯ ವಿಧಾನದಲ್ಲಿ ಸಾಕಷ್ಟು ಭಿನ್ನತೆಗಳಿವೆ. ಹೆಸರೇ ಸೂಚಿಸುವಂತೆ ಇದು ಸುಗ್ಗಿಯ ಹಬ್ಬ. ಇದು ಸುಗ್ಗಿಯನ್ನು ಪ್ರತಿನಿಧಿಸುವ ಹಬ್ಬದಂತೆ ಕಂಡರೂ ಸುಗ್ಗಿಯ ಸಾಂಕೇತಿಕ ಹಬ್ಬವಾಗಿರದೆ ಸುಗ್ಗಿಯ ಕಾಲ ಮುಗಿದು ವಿರಾಮಿಸುವ ಸಂದರ್ಭದಲ್ಲಿ ಆಚರಿಸಿಕೊಂಡು ಬಂದಿರುವ ಹಬ್ಬ. ಮಲೆನಾಡ ಪ್ರದೇಶದಲ್ಲಿ ಬಹುಸಂಖ್ಯಾತರಿಗೆ ಭೂ ಒಡೆತನವಿಲ್ಲ. ಹಾಗಾದರೆ ಸುಗ್ಗಿ ಹಬ್ಬವನ್ನು ಆಚರಿಸುವ ವೈಶಿಷ್ಟ್ಯವೆಂದರೆ, ಭೂ ಒಡೆತನದ ಮಾಲೀಕರು ಸುಗ್ಗಿಯ ಸಂತೋಷವನ್ನು ವ್ಯಕ್ತಪಡಿಸಿದರೆ, ಭೂರಹಿತ ಕಾರ್ಮಿಕರಿಗೆ ವಿರಾಮದ ಹಬ್ಬ. ಸುಗ್ಗಿ ಬಂದ ಮೇಲೆ ಸ್ವಲ್ಪ ಸಮಯದವರೆಗೆ ಕೆಲಸಕ್ಕೆ ಬಿಡುವಿರುವುದರಿಂದ ಹಾಗೂ ಮೇಲಿನವರ ಒತ್ತಾಯಕ್ಕೆ ಆಚರಿಸುವ ಹಬ್ಬದಂತೆ ಕಾಣುತ್ತದೆ. ಅನೇಕ ಗ್ರಾಮಗಳಲ್ಲಿ ದಲಿತರ,ಶೋಷಿತರ ಪ್ರತಿಭಟನೆಯಿಂದ ಸುಗ್ಗಿ ಹಬ್ಬಗಳು ನಿಂತಿರುವುದನ್ನೂ ಗಮನಿಸಬಹುದು. ಮಲೆನಾಡಿನ ಈ ಸುಗ್ಗಿ ಹಬ್ಬವನ್ನು ಆಚರಿಸುವುದು ಸಾಮಾನ್ಯವಾಗಿ ಆಯಾ ಊರಿನ ಮೂಲ ನಿವಾಸಿಗಳು. ಆ ಮೂಲನಿವಾಸಿಗಳು ಆಳುವ ಮತ್ತು ಆಳಿಸಿಕೊಳ್ಳುವ ಸಮುದಾಯದವರಾಗಿದ್ದಾರೆ. ಹಿಂದಿನವರು ನಡೆಸಿಕೊಂಡು ಬಂದಿರುವ ಪದ್ಧತಿ,ರೂಢಿ–ಸಂಪ್ರದಾಯಗಳನ್ನೇ, ನಂಬಿಕೆಗಳನ್ನೇ ಮುಂದುವರಿಸಿಕೊಂಡು ಬರುತ್ತಿರುವ ರೀತಿಯನ್ನು ಕಾಣಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಇದಕ್ಕೆ ಪ್ರಬಲವಾದ ಪ್ರತಿರೋಧ ಪ್ರಾರಂಭವಾಗಿದೆ. ಆಯಾ ಗ್ರಾಮಗಳಲ್ಲಿ ವಾಸವಾಗಿರುವ ನಿವಾಸಿಗಳಲ್ಲಿ ಪ್ರಬಲ,ಮಧ್ಯಮ ಮತ್ತು ಕೆಳ ಜನಾಂಗದವರು ಒಟ್ಟಾಗಿ ಸೇರಿ ಆಚರಿಸುವ ಈ ಹಬ್ಬ ಜಾತ್ರೆ ಎನಿಸುವುದಿಲ್ಲ. ನೀತಿ ನಿಯಮಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಜಾತ್ರೆಗಳಲ್ಲಿ ನಿರ್ಬಂಧಗಳು ವಿರಳ ಆದರೆ ಸುಗ್ಗಿಯ ಹಬ್ಬದಲ್ಲಿ ನಿರ್ಬಂಧಗಳೇ ಹಬ್ಬವನ್ನು ಆಚರಿಸುವ ಮತ್ತು ನಿಯಂತ್ರಿಸುವ ಪ್ರಮುಖ ಅಸ್ತ್ರಗಳಾಗಿವೆ. ಆಯಾ ಮಲೆನಾಡಿನ ಗ್ರಾಮಗಳಲ್ಲಿ ಹೆಚ್ಚಿನ ಭಾಗ ವಕ್ಕಲಿಗರೇ ಪ್ರಬಲವಾದ ಜನಾಂಗದವರಾಗಿದ್ದು, ಮಧ್ಯಮ ಜನಾಂಗದಲ್ಲಿ ಕುಂಬಾರ ಶೆಟ್ಟರು. ಬಿಳಿಮೊಗ ಶೆಟ್ಟರು,ವಿಶ್ವಕರ್ಮ ಆಚಾರಿಗಳು,ಮಡಿವಾಳ ಶೆಟ್ಟರು ಪ್ರಮುಖರಾಗಿರುತ್ತಾರೆ. ಕೆಳ ಮತ್ತು ದುರ್ಬಲರೆಂದು ಹೊಲೆಯರು,ಮಾದಿಗರನ್ನು ಗುರುತಿಸಲಾಗುತ್ತದೆ. ದುರ್ಬಲರೆಂದು ಕರೆಯಲು ಕಾರಣವೆಂದರೆ ಮೇಲಿನ ಎರಡೂ ವರ್ಗದವರು ನಿರ್ಧರಿಸಿದ ಕಟ್ಟುಪಾಡುಗಳನ್ನು, ರೀತಿನೀತಿಗಳನ್ನು, ಸಂಪ್ರದಾಯಗಳನ್ನು, ಕೆಲಸ ಕಾರ್ಯಗಳನ್ನು ತಪ್ಪದೆ ಮಾಡಬೇಕಾಗಿರುವುದರಿಂದ ಹಾಗೂ ತಪ್ಪಿದರೆ ಮೇಲಿನವರು ನಿರ್ಧರಿಸುವ ಶಿಕ್ಷೆಗಳಿಗೆ ಒಳಗಾಗಬೇಕಾದವರು. ಮಧ್ಯಮ ಜನಾಂಗದವರು ಮಾಡುವ ತಪ್ಪುಗಳಿಗೆ ಕ್ಷಮೆ ಇರುತ್ತದೆ. ಆದರೆ ಪ್ರಬಲರಾದವರು ಮಾಡುವ ಯಾವುದೇ ತಪ್ಪುಗಳಿಗೆ ಶಿಕ್ಷೆ ಇಲ್ಲ ಹಾಗೂ ಪ್ರಶ್ನಿಸುವ ಹಕ್ಕು ಕೆಳಗಿನವರಿಗೆ ಇರುವುದಿಲ್ಲ. ಮೊದಮೊದಲು ಕೆಳಗಿನ ಜಾತಿಯವರು ಯಾವುದೇ ತಪ್ಪುಗಳನ್ನು ಮಾಡಿದರೆ ದೇವರೇ ಶಿಕ್ಷೆಯನ್ನು ನೀಡುತ್ತಾನೆಂದು ಬೆದರಿಸಿ ಅದಕ್ಕೂ ಬಗ್ಗದಿದ್ದಾಗ ತಾವೇ

ಸಾಮೂಹಿಕವಾಗಿ ಶಿಕ್ಷಿಸಿರುವ ಅನೇಕ ನಿದರ್ಶನಗಳಿವೆ. ಆದರೆ ಇಂದು ಪರಿಣಾಮಗಳನ್ನು ಸಂಪೂರ್ಣವಾಗಿ ದೇವರಿಗೆ ಒಪ್ಪಿಸಿ ಬಿಡುವ ವಿಧಾನವಿದೆ. ಹಬ್ಬದ ಪೂರ್ವಭಾವಿಯಾಗಿ ಹಬ್ಬವನ್ನು ಆಚರಿಸುವ ಎಲ್ಲಾ ಜನಾಂಗದವರ ಸಭೆಯನ್ನು ಕರೆಯಲಾಗುತ್ತದೆ. ಹಬ್ಬದ ದಿನಾಂಕವನ್ನು ನಿರ್ಧರಿಸುವಾಗ ಅನೇಕ ಮಾರ್ಗೋಪಾಯಗಳನ್ನು ಮೇಲಿನ ಜಾತಿಯವರೇ ನಿರ್ಧರಿಸುತ್ತಾರೆ. ಉದಾಹರಣೆಗೆ ಹಬ್ಬವನ್ನು ಪ್ರಾರಂಭಿಸುವ ವಾರದಲ್ಲಿ ವಕ್ಕಲಿಗ ಸಮುದಾಯದಲ್ಲಿ ಯಾರದಾದ್ದರೂ ವಿವಾಹದ ನಿಶ್ಚಯವಾಗಿದ್ದರೆ ಹಬ್ಬದ ದಿನಾಂಕವನ್ನೇ ಬದಲಾಯಿಸಲಾಗುತ್ತದೆ. ಕಾರಣ ಹಬ್ಬದ ಸಂದರ್ಭದಲ್ಲಿ ವಿವಾಹಕಾರ್ಯ ಮಾಡುವಂತಿಲ್ಲ ಎಂಬ ನಿಯಮವಿರುವುದರಿಂದ. ಆದರೆ ಕೆಳಗಿನ ಸಮುದಾಯದಲ್ಲಿ ವಿವಾಹ ನಿಶ್ಚಯವಾಗಿದ್ದರೂ ಹಬ್ಬದ ದಿನಾಂಕವನ್ನು ಘೋಷಿಸಿ ಮದುವೆ ಕಾರ್ಯವನ್ನೇ ಮುಂದೂಡುವಂತೆ ಮಾಡಿರುವ ನಿದರ್ಶನಗಳಿವೆ. ಈ ರೀತಿಯ ನಿರ್ಧಾರಗಳು ಹಬ್ಬ ಆಚರಿಸುವ ಎಲ್ಲಾ ಗ್ರಾಮಗಳಲ್ಲೂ ಒಂದೇ ರೀತಿ ಇರುವ ಸಾಮ್ಯತೆ ಕಾಣಬಹುದು.

ಹಬ್ಬ ಪ್ರಾರಂಭವಾದ ನಂತರ ಹಬ್ಬವನ್ನು ಆಚರಿಸುವ ಯಾವುದೇ ಜಾತಿಯಲ್ಲಿ ಯಾರಾದರೂ ಮರಣ ಹೊಂದಿದರೆ ಆ ದಿನದ ಹಬ್ಬ ಪ್ರಾರಂಭಿಸುವ ಮೊದಲೇ ಶವವನ್ನು ಸಂಸ್ಕಾರ ಮಾಡಬೇಕಾಗಿರುತ್ತದೆ. ಸುಗ್ಗಿ ಹಬ್ಬದ ಅವಧಿಯಲ್ಲಿನ ಹಬ್ಬಗಳು ಹೆಚ್ಚು ರಾತ್ರಿಯ ವೇಳೆಯಲ್ಲಿಯೇ ನಡೆಯುವುದರಿಂದ ಸಂಬಂಧಿಕರಿಗೂ ವಿಚಾರವನ್ನು ಮುಟ್ಟಿಸದೆ ತಕ್ಷಣ ಶವವನ್ನು ಊರಿನಿಂದ ಹೊರ ಸಾಗಿಸಿ ಸಂಸ್ಕಾರ ಮಾಡಬೇಕಾಗಿರುತ್ತದೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ ಹೆಣವನ್ನು ಸುಡುವ ಸಂಪ್ರದಾಯವಿದೆ. ಆದರೆ ಸುಗ್ಗಿ ಹಬ್ಬದಲ್ಲಿ ಮರಣಹೊಂದಿದರೆ ಹೆಣವನ್ನು ಸುಡುವ ಅವಕಾಶವಿಲ್ಲ. ಗುಂಡಿಯನ್ನು ತೆಗೆದು ರಾತ್ರೋರಾತ್ರಿ ಶವವನ್ನು ಹೂಳಬೇಕಾಗುತ್ತದೆ. ಮರಣ ಹೊಂದಿದ ಕುಟುಂಬದ ಸಂಬಂಧಿಕರು ಮತ್ತು ಬಂಧುಗಳು ದೇವರ ದರ್ಶನಕ್ಕೆ ಹೋಗುವಂತಿಲ್ಲ. ದೇವರನ್ನು ಪೂಜಿಸುವ ಅಥವಾ ದೇವರನ್ನು ಹೊರುವವರ ಮನೆಯಲ್ಲಿಯೇ ಮರಣ ಹೊಂದಿದರೆ ಅವರೂ ಸಹ ಶವವನ್ನು ನೋಡುವಂತೆಯೇ ಇಲ್ಲ. ಇದು ಹಬ್ಬವನ್ನು ಆಚರಿಸುವ ಎಲ್ಲಾ ಗ್ರಾಮದವರಿಗೂ ಒಂದೇ ಸಂಪ್ರದಾಯವಿದೆ.

ಸಾಮಾನ್ಯವಾಗಿ ಸುಗ್ಗಿ ಹಬ್ಬ 10(ಹತ್ತು)ರಿಂದ 15(ಹದಿನೈದು) ದಿನಗಳಕಾಲ ನಡೆಯುವುದರಿಂದ ಒಂದೊಂದು ದಿನವು ಬೇರೆ ಬೇರೆ ವಿಧಾನದ ಆಚರಣೆಗಳು ನಡೆಯುತ್ತವೆ. ಈ ಅವಧಿಯಲ್ಲಿ ಹೆಣ್ಣುಮಕ್ಕಳಿಗೆ ವಿಧಿಸಿರುವ ನಿಯಮ ಇನ್ನೂ ಕಟ್ಟುನಿಟ್ಟು. ಹಬ್ಬ ಘೋಷಣೆಯಾಗುವ ದಿನಾಂಕಕ್ಕೆ ಹೆಣ್ಣು ಮಕ್ಕಳಿಗೆ ಮುಟ್ಟಾಗುವ ಸಮಯ ಹತ್ತಿರವಿದ್ದರೆ ಅಂತಹವರು ಹಬ್ಬ ಪ್ರಾರಂಭವಾಗುವ ಮೊದಲೇ ತಾವು ಮನೆಯನ್ನು ಬಿಟ್ಟು ಕಾಡುಗಳಲ್ಲಿ, ತೋಟಗಳಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ಹಬ್ಬಕ್ಕೆ ಹೋಗುವ ಯಾರಿಗೂ ಕಾಣದಂತೆ ವಾಸಮಾಡಬೇಕಾಗುತ್ತದೆ. ಇಲ್ಲವೆ ಗ್ರಾಮದಿಂದ ದೂರವಿರುವ ಇತರೆ ಬಂಧುಗಳ ಮನೆಯಲ್ಲಿ ಇರಬೇಕಾಗುತ್ತದೆ. ಇವರಿಗೆ ಊಟವನ್ನು ನಿಗಧಿಪಡಿಸಿದ ಸ್ಥಳದಲ್ಲಿ ಮನೆಯವರು ತಂದು ಇಟ್ಟು ಹೋದ ನಂತರ ತೆಗೆದುಕೊಂಡು ಊಟಮಾಡಬೇಕಾಗುತ್ತದೆ. ಹಬ್ಬ ಪ್ರಾರಂಭವಾದ ನಂತರದಲ್ಲಿ ಮುಟ್ಟಾದರೆ ರಾತ್ರಿಯ ವೇಳೆಯಲ್ಲಿಯೇ ಮನೆಯ ಅಥವಾ ಊರಿನ ಯಾವ ಗಂಡಸರಿಗೂ ಕಾಣದೇ ಮನೆಯನ್ನು ಬಿಟ್ಟು ಜನ ಸಂಪರ್ಕವಿಲ್ಲದ ಸ್ಥಳಕ್ಕೆ ಹೋಗಬೇಕಾಗುತ್ತದೆ. ಆದರೆ ಕೆಲವು ಗ್ರಾಮಗಳಲ್ಲಿ ಈ ಆಚರಣೆಯ ಬಗ್ಗೆ ಸ್ವಲ್ಪ ಸಡಿಲಿಕೆಯನ್ನು ಕಾಣಬಹುದು.ಇದು ಒಂದು ರೀತಿಯ ಭಿನ್ನತೆಯೆಂದೇ ಹೇಳಬಹುದು.ಆಗ ಹಬ್ಬ ಮುಗಿಯುವ 3(ಮೂರು) ದಿನಗಳ ಹಿಂದೆ ಕೆಂಡದ ಉತ್ಸವ ನಡೆಯುತ್ತದೆ.ಅಲ್ಲಿಯವರೆಗೆ ಮನೆಯ ಹೊರಗೆ ಯಾವುದೋ ಕೋಣೆಯಲ್ಲಿದ್ದು ಕೆಂಡದ ಉತ್ಸವ ನಡೆದ ನಂತರ ಸ್ನಾನ ಮಾಡಿ ಒಳಗೆ ಬರುವ ಅವಕಾಶ ಮಾಡಲಾಗಿದೆ. ಕನಿಷ್ಠ 5 (ಐದು) ದಿನವಾದರೂ ಮನೆಯಿಂದ ಹೊರಗೆ ಇರಲೇಬೇಕಾಗಿದೆ.

ಹಬ್ಬದ ಸಂದರ್ಭದಲ್ಲಿ ದೂರ ಪ್ರಯಾಣಿಸುವ ಹಾಗಿಲ್ಲ. ಮನೆಯಿಂದ ಹೊರಗೆ ಹೊರಡುವ ಸಂದರ್ಭ ಮನೆಯವರಿಗೆ ಬಂದರೆ, ಅಂದರೆ ಮನೆಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಪ್ರಯಾಣಿಸುವಾಗ ಹೆಂಗಸರೊಡನೆ ಮಾತನಾಡುವಂತಿಲ್ಲ ಕಾರಣ ಮುಟ್ಟಾಗಿರುವರೆಂದು. ಒಂದು ವೇಳೆ ಮಾತನಾಡಿಸಲೇ ಬೇಕಾದ ಸಂದರ್ಭ ಬಂದಲ್ಲಿ ಅರಿಯದೇ ಮಾಡುವ ತಪ್ಪು ಎಂದು ದೇವರಲ್ಲಿ ಬೇಡುವ ಸಂಪ್ರದಾಯವಿದೆ. ಹಿಂತಿರುಗಿ ಬಂದ ಮೇಲೆ ಮೈಮೇಲೆ ಸೆಗಣಿಯ ನೀರನ್ನು ಸಿಂಪಡಿಸಿಕೊಂಡು ನಂತರ ಸ್ನಾನ ಮಾಡಿಯೇ ಮನೆಯ ಒಳಗೆ ಬರಬೇಕಾಗಿರುತ್ತದೆ. ಕೆಲವು ಗ್ರಾಮಗಳಲ್ಲಿ ಇದು ಕಟ್ಟುನಿಟ್ಟಿನ ಆಚರಣೆಯಾದರೆ ಇನ್ನೂ ಕೆಲವು ಕಡೆ ಆಚರಣೆಯಲ್ಲಿ ಸಡಿಲಿಕೆಯಿದೆ. ದೇವರನ್ನು ಪೂಜಿಸಲು ಹಾಗೂ ಮೆರವಣಿಗೆಯಲ್ಲಿ ಹೊರಲು ಹೋಗುವವರನ್ನು 'ಹಸಿಗೆ ಇರುವವರು' ಎಂದು ಕರೆಯಲಾಗುತ್ತಿದೆ. ಇಂತಹವರು ಹಬ್ಬ ಪ್ರಾರಂಭವಾದ ದಿನದಿಂದ ಮುಗಿಯುವವರೆಗೆ ಮನೆಗೆ ಬರುವಂತಿಲ್ಲ. ದೇವಾಲಯಗಳಲ್ಲೇ ಉಳಿಯುವ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಮನೆಗೆ ಬಂದರೆ ದೇವರಿಗೆ ಮಾಡುವ ಅಪಚಾರವೆಂದು, ಇದರಿಂದ ಮನೆಯವರಿಗೆಲ್ಲಾ ತೊಂದರೆಯಾಗುತ್ತದೆ ಎಂಬ ನಂಬಿಕೆಯಿದೆ.

ಸುಗ್ಗಿ ಹಬ್ಬ ಪ್ರಾರಂಭವಾದ ದಿನದಿಂದ ಮುಗಿಯುವವರೆಗೆ ಹಬ್ಬ ಆಚರಿಸುವ ಯಾವ ಮನೆಯವರೂ ಚಪ್ಪಲಿಯನ್ನು ಧರಿಸುವ ಹಾಗಿಲ್ಲ.ಎಲ್ಲಿಗಾದರೂ ಪ್ರಯಾಣಿಸ ಬೇಕಾದರೆ ಬರಿಗಾಲಿನಲ್ಲಿಯೇ ಪ್ರಯಾಣಿಸಬೇಕು. ಬಹುಶ: ಪ್ರಾಣಿಗಳ ಚರ್ಮದಿಂದ ತಯಾರಿಸಲಾಗಿದೆ ಎಂಬ ನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆ. ಬರಿಗಾಲಿನಲ್ಲಿ ನಡೆದಾಡಿದರೆ ರೋಗರುಜಿನಗಳು ಈ ದಿಗಳಲ್ಲಿ ಬರುವುದಿಲ್ಲವೆಂಬ ನಂಬಿಕೆ ಇರುವುದರಿಂದ. ಕೆಳಜಾತಿಯ ಯಾರೂಕೂಡ ಮೇಲಿನ ಜಾತಿಯವರನ್ನು ಮುಟ್ಟುವಂತೆಯೂ ಇರುವುದಿಲ್ಲ. ಈ ಹಬ್ಬದ ಅವಧಿಯಲ್ಲಿ ಅಕ್ಕಿಯನ್ನು ಬೇಯಿಸಿ ಬಸಿಯುವಂತಿಲ್ಲ, ಹಾಗೂ ಕೆಲವು ಗ್ರಾಮಗಳಲ್ಲಿ ಸ್ವಲ್ಪ ಭಿನ್ನತೆಯೆಂದರೆ ಅನ್ನವನ್ನು ಊಟ ಮಾಡದಿರುವುದನ್ನು ಕಾಣಬಹುದಾಗಿದೆ. ಹಬ್ಬ ಪ್ರಾರಂಭವಾದ ಮೊದಲನೇ ದಿವಸ ಮತ್ತು ಮುಕ್ತಾಯವಾಗುವ 4(ನಾಲ್ಕು) ದಿನಗಳು ಮಾತ್ರ ಚಪ್ಪಲಿ ಧರಿಸದೇ ಉಳಿದ ದಿನಗಳಲ್ಲಿ ಚಪ್ಪಲಿ ಧರಿಸು ಆಚರಣೆಯೂ ಇದೆ.

ಹಬ್ಬ ಪ್ರಾರಂಭವಾಗುವ ಮೊದಲೇ ಮನೆಯಲ್ಲಿ ಬಳಸಲ್ಪಡುವ ಎಲ್ಲಾ ವಸ್ತುಗಳನ್ನು ತೊಳೆಯಬೇಕಾ ಗಿರುವುದರಿಂದ ಪಾತ್ರೆಗಳು,ಬಟ್ಟೆಗಳು, ದಿನನಿತ್ಯದ ವಸ್ತುಗಳು ಮತ್ತು ಹಾಸಿಗೆಗಳು ಶುದ್ಧೀಕರಣಗೊಳ್ಳುತ್ತವೆ. ಹಬ್ಬ ಪ್ರಾರಂಭದಿಂದ ಮುಗಿಯುವವರೆಗೆ ದಪ್ಪನಾದ ಹಾಸಿಗೆ ಮತ್ತು ಮಂಚದ ಮೇಲೆ ಮಲಗುವಂತಿಲ್ಲ ಮತ್ತು ಅವುಗಳ ಮೇಲೆ ಕೂರುವಂತೆಯೂ ಇಲ್ಲ.ಆದಕಾರಣ ಅವುಗಳನ್ನು ಮನೆಯ ಒಂದು ಮೂಲೆಗೆ ಅಥವಾ ಅಟ್ಟದ ಮೇಲೆ ಇಡಲಾಗುತ್ತದೆ.ಈ ಅವಧಿಯಲ್ಲಿ ಬೇರೆ ಊರಿನವರನ್ನು ಮನೆಗೆ ಸೇರಿಸದ ಕಾರಣ ಸಮಸ್ಯೆ ಉದ್ಭವಿಸುವುದಿಲ್ಲ. ಮುಕ್ತ ಅವಕಾಶವಿರುವ ಗ್ರಾಮಗಳು ಇರುವುದರಿಂದ ಅಲ್ಲಿ ಈ ನಿರ್ಬಂಧವಿಲ್ಲ. ಚೌತ ಪ್ರಾರಂಭವಾದ ದಿನದಿಂದ ಮುಗಿಯುವವರೆಗೆ ಸಂಪೂರ್ಣವಾಗಿ ಮದ್ಯಪಾನವನ್ನು ನಿಷೇಧಿಸಲಾಗುತ್ತದೆ. ಧೂಮಪಾನಕ್ಕೆ ಈ ನಿರ್ಬಂಧವಿಲ್ಲ. ಆದರೆ ಚೌತ ಪ್ರಾರಂಭವಾಗುವ ಹಿಂದಿನ ದಿನವೇ 'ಕುಡಿದು–ಉಣ್ಣುವ' ಹಬ್ಬವೆಂದೇ ಆಚರಿಸುವುದರಿಂದ ಈ ಅವಧಿಯಲ್ಲಿ ಮಾಂಸಹಾರ ಮತ್ತು ಮದ್ಯಪಾನ ಮಾಡಲು ಅವಕಾಶವಿದೆ. ಇನ್ನು ಚೌತ ಮುಗಿಯುವವರೆಗೆ ಸಂಪೂರ್ಣ ನಿಷಿದ್ಧ. ಆದರೆ ಕೆಲವೊಂದು ಗ್ರಾಮಗಳಲ್ಲಿ ಈ ಪ್ರಕಾರದ ಆಚರಣೆಯಲ್ಲಿ ಸಡಿಲಿಕೆ ಇರುವುದನ್ನು

ಕಾಣಬಹುದು. ಸುಗ್ಗಿ ಹಬ್ಬ ಒಂದು ರೀತಿಯಲ್ಲಿ ಸ್ವಗ್ರಾಮವನ್ನು ಶುದ್ಧೀಕರಿಸುವ ಹಾಗೂ ಬಂಧು-ಬಾಂಧವರನ್ನು ಬೇರೆ ಊರಿನವರನ್ನು ನಿಷೇಧಿಸುವ ಹಬ್ಬವೆಂದೇ ಹೇಳಬಹುದು. ಹಾಗಾಗಿಯೇ ಈ ಹಬ್ಬಕ್ಕೆ ಈ ಹೆಸರು ಸೂಕ್ತವಲ್ಲವೆಂದೇ ಹೇಳಬಹುದು. ಚೌತದ ಕೊನೆಯ ದಿನ ಎಲ್ಲರನ್ನು ಆಹ್ವಾನಿಸಿದರೂ ಅವರೆಲ್ಲರೂ ಶುದ್ಧರಾಗಿಯೇ ಬರಬೇಕಾಗಿರುತ್ತದೆ. ಒಂದು ವೇಳೆ ಶುದ್ಧರಾಗಿ ಬರದಿದ್ದರೆ ಜೇನುಹುಳಗಳು ದಾಳಿಮಾಡುತ್ತವೆಯೆಂದು ಬೆದರಿಸಲಾಗುತ್ತದೆ. ಔಚಿತ್ಯವೆಂದರೆ, ಎಲ್ಲಾ ಊರಿನ ದೇವಾಲಯಗಳ ಸುತ್ತಮುತ್ತ ದೊಡ್ಡ ದೊಡ್ಡ ಮಾವಿನ ಮರಗಳಿದ್ದು ಆ ಮರಗಳಲ್ಲಿ ಹೆಜ್ಜೇನುಗಳು ವಾಸಿಸುತ್ತಿದ್ದು ಹಬ್ಬ ಮುಗಿದ ಸ್ವಲ್ಪ ಸಮಯದ ನಂತರ ಬಿಟ್ಟು ಹೋಗಿ ಮುಂದಿನ ವರ್ಷಕ್ಕೆ ಪುನ: ಆಗಮಿಸುತ್ತವೆ.

ಹಬ್ಬವನ್ನು ಆಚರಿಸುವ ಎಲ್ಲಾ ಗ್ರಾಮಗಳಲ್ಲೂ ಆಚರಣೆಯಲ್ಲಿರುವ ಸಾಮಾನ್ಯ ರೀತಿ-ನೀತಿ, ಕಟ್ಟುಪಾಡು, ಸಂಪ್ರದಾಯಗಳೆಂದರೆ, ಜಾತಿಯ ತಾರತಮ್ಯತೆ. ಕೆಳಜಾತಿಯವರಾದ ಬಹುಸಂಖ್ಯಾತ ಹೊಲೆಯರು, ಅಲ್ಪಸಂಖ್ಯಾತ ಮಾದಿಗರು ಆಯಾ ಊರಿನ ಮುಖ್ಯ ದೇವರ ದೇವಾಲಯದ ಪ್ರವೇಶ ಸಂಪೂರ್ಣ ನಿಷಿದ್ಧ. ಇದು ಕಡ್ಡಾಯದ ನಿಯಮವೂ ಕೂಡ. ಕೆಂಡ ಹಾಯುವ ಸಂದರ್ಭದಲ್ಲಿ ಕೆಳಜಾತಿಯವರಿಗೆ ಅವಕಾಶವಿಲ್ಲ. ಮೇಲಿನ ಜಾತಿಯವರು ಕೆಂಡ ಹಾಯ್ದಾದ ನಂತರ ಕೆಂಡವನ್ನು ಸೊಪ್ಪಿನಿಂದ ಮುಚ್ಚುವರು. ಆ ದೇವರಿಗೆ ಹಣ್ಣನ್ನು ಒಪ್ಪಿಸುವಾಗ ಕೆಳಜಾತಿಯವರ ಮನೆಯ ಹಣ್ಣುಗಳಾಗಿರಬಾರದು. ಕೆಳಜಾತಿಯವರು ಹಣ್ಣನ್ನು ಒಪ್ಪಿಸಬೇಕಾದರೆ ಮೇಲಿನ ಜಾತಿಯವರಿಗೆ ಹಣವನ್ನು ನೀಡಿದರೆ ಅವರು ತಮ್ಮಲ್ಲಿರುವ ಹಣ್ಣನ್ನು ಒಪ್ಪಿಸಿ ನಂತರ ತಂದು ನೀಡುವ ಪದ್ಧತಿಯಿದೆ. ಹಬ್ಬದ ದಿನ ಘೋಷಣೆಯಾದ ನಂತರ ಕೆಳಜಾತಿಯವರು ಪ್ರತಿಮನೆಗೊಬ್ಬರಂತೆ ಹಬ್ಬ ನಡೆಯುವ ಸ್ಥಳಗಳನ್ನು ಸ್ವಚ್ಛಮಾಡಬೇಕಾಗಿರುತ್ತದೆ. ಇದನ್ನು 'ಬಿಟ್ಟಿ' ಎಂದು ಕರೆಯಲಾಗುತ್ತದೆ. ಇದು ಕಡ್ಡಾಯ ನಿಯಮ. ಈ ನಿಯಮವನ್ನು ಮೀರಿದ ದಲಿತ ಕುಟುಂಬಗಳನ್ನು ಬಹಿಷ್ಕರಿಸುವ ಪದ್ಧತಿ ಜಾರಿಯಲ್ಲಿದೆ. ಹಬ್ಬ ಪ್ರಾರಂಭದಿಂದ ಮುಗಿಯುವವರೆಗೆ ದೇವರ ಮುಖ್ಯ ಪೂಜಾರಿಗಳಾದ ಶೆಟ್ಟರು ವಾಸಿಸುವ ಗ್ರಾಮಕ್ಕೆ ಯಾವ ದಲಿತನೂ ಕೂಡ ಪ್ರವೇಶಮಾಡುವಂತಿಲ್ಲ. ಈ ಆಚರಣೆಯಲ್ಲಿ ಕುಂಬಾರಶೆಟ್ಟರು,ಬಿಳಿಮೊಗ ಶೆಟ್ಟರು ಪ್ರಮುಖರು. ಕೆಳಜಾತಿಯವರು ಪೂಜಿಸುವ ಅನೇಕ ದೇವರುಗಳು ಈ ಹಬ್ಬದಲ್ಲಿ ಪಾಲ್ಗೊಂಡರೂ ಅವುಗಳು ಮುಖ್ಯ ದೇವರ ಸರಿಸಮನಾಗಿ ಮೆರವಣಿಗೆಯಲ್ಲಿ ಬರುವಂತಿಲ್ಲ ಹಾಗೂ ಅವಗಳನ್ನು ಕೂರಿಸಲು ಪ್ರತ್ಯೇಕ ಸ್ಥಳಗಳನ್ನೇ ಮಾಡಲಾಗಿರುತ್ತದೆ. ಕೆಲವು ಗ್ರಾಮಗಳಲ್ಲಿ ಆ ದಿನದ ಹಬ್ಬ ಪ್ರಾರಂಭವಾಗುವ ಪ್ರತೀದಿನ ಪ್ರತಿಯೊಂದು ವಕ್ಕಲಿಗರ ಮನೆ ಮನೆ ತೆರಳಿ ಹಬ್ಬಕ್ಕೆ ಆಹ್ವಾನಿಸುವ ಕೆಲಸ ಕೆಳಜಾತಿಯವರದಾಗಿರುತ್ತದೆ. ವಕ್ಕಲಿಗರಲ್ಲಿ ಯಾವುದೇ ಒಂದು ಮನೆಯವರನ್ನು ಕರೆಯದೇ ಬಂದಿದ್ದರೆ ಶಿಕ್ಷೆ ಕಟ್ಟಿಟ್ಟ ಬುತ್ತಿ. ದೇವರ ಜೊತೆಯಲ್ಲಿ ಕುಣಿಯುವುದು ಹಾಗೂ ಕೋಲು ಹೊಡೆಯುವುದು ಕೆಳಜಾತಿಯವರಿಗೆ ನಿಷಿದ್ಧ.

ಈ ಲೇಖನದಲ್ಲಿ ಚಿಕ್ಕಮಗಳೂರು ಜಿಲ್ಲೆ ಮತ್ತು ತಾಲ್ಲೂಕಿನ ಕಟ್ರುಮನೆ, ಬೈಗೂರು,ಬ್ಯಾರುವಳ್ಳಿ ಮತ್ತು ಆವತಿ ಎಂಬ ಗ್ರಾಮಗಳು ಆಚರಿಸುವ ಸುಗ್ಗಿ ಹಬ್ಬದ ಆಚರಣೆಯ ವಿಧಾನವನ್ನು ಚರ್ಚಿಸಲಾಗಿದೆ. ಪ್ರತಿ ಗ್ರಾಮ ವ್ಯಾಪ್ತಿಯಲ್ಲಿ ಐದರಿಂದ ಎಂಟು ಹಳ್ಳಿಗಳು ಬರುತ್ತವೆ. ಆವತಿ ಗ್ರಾಮದ ವ್ಯಾಪ್ತಿಯಲ್ಲಿ ಆವತಿ, ಹೊಸಮನೆ,ಕುಂಬಾರಹಳ್ಳಿ, ಹೊಸಹಳ್ಳಿ, ಬಾಳೇಧರ, ಹಾರ್ಜಿಹಳ್ಳಿ, ಉತ್ತಗನಹಳ್ಳಿ, ನರಿಗುಡ್ಡೆ, ಗಾಂಧೀನಗರ ಕರಗೂರು ಮತ್ತು ದಾನಿಹಳ್ಳಿ ಎಂಬ ಹಳ್ಳಿಗಳು ಬರುತ್ತವೆ. ಆದರೆ ಈ ಎಲ್ಲಾ ಹಳ್ಳಿಗಳಲ್ಲೂ ಒಂದೇ ರೀತಿಯ ಆಚರಣೆ ಇರುವುದು ಕಂಡುಬರುವುದಿಲ್ಲ. ಸಾಕಷ್ಟು ಭಿನ್ನತೆಗಳೇ ಇವೆ. ಚೌತದಲ್ಲಿ ಕಟ್ರುಮನೆ ವ್ಯಾಪ್ತಿಯ ಹಳ್ಳಿಗಳಲ್ಲಿ ಅತ್ಯಂತ ಕಠಿಣ ಮತ್ತು ಶಿಸ್ತಿನ ಸುಗ್ಗಿ ನಡೆದರೆ, ಆವತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಚೌತ ಸರಳವಾಗಿ ಉಳಿದವುಗಳಿಗಿಂತ ಭಿನ್ನವಾದ ರೂಪದಲ್ಲಿದೆ. ಆದರೆ ಎಲ್ಲಾ ಗ್ರಾಮಗಳ ಹಬ್ಬಗಳಲ್ಲಿ ವಕ್ಕಲಿಗರೇ ಪ್ರಧಾನ.ಅದು ಪ್ರತಿಷ್ಠೆಯೂ ಕೂಡ.

ಈ ಸುಗ್ಗಿ ಹಬ್ಬದ ಮುಖ್ಯ ದೇವತೆ 'ದೇವಿರಮ್ಮ'. ಈ ಎಲ್ಲಾ ಗ್ರಾಮಗಳಲ್ಲೂ ಇದೇ ಹೆಸರಿನಿಂದ ಕರೆದರೂ ಪ್ರಮುಖ ಹಳ್ಳಿಗಳ ಸಂಖ್ಯೆಗನುಗುಣವಾಗಿ 'ಐದೂರಮ್ಮ', 'ನಾಲ್ಕೂರಮ್ಮ', 'ಮೂರೂರಮ್ಮ' ಎಂಬ ಹೆಸರುಗಳಿವೆ. ಈ ಆಚರಣೆಯಲ್ಲಿ ದೇವರುಗಳಿಗೆ ಸಂಬಂಧವೂ ಇದೆ. ದೇವಿರಮ್ಮನ ತಾಯಿ ದೊಡ್ಡ ದೇವಿರಮ್ಮ ಅಥವಾ ತಾಯಮ್ಮ, ದೇವಿರಮ್ಮನ ಗಂಡ ಉದ್ದಂಡರಾಯ, ಇವರ ಮಗ ಭೂತಪ್ಪ (ದನದ ಚರ್ಮದಿಂದ ಮಾಡಬೇಕಾಗಿರುವುದರಿಂದ ಇದನ್ನು ಕೆಳ ಜಾತಿಯವರು ಪೂಜಿಸುವರು.) ಇವರುಗಳಲ್ಲದೆ ದೊಡ್ಡಮ್ಮ, ಚಿಕ್ಕಮ್ಮ, ಹನುಮಲಿಂಗೇಶ್ವರ ಎಂಬ ಇತರ ದೇವತೆಗಳೂ ಪ್ರಮುಖವಾದವುಗಳಾಗಿವೆ. ಆವತಿಯಲ್ಲಿ 'ನಾಲ್ಕೂರಮ್ಮ' ಎಂದು ಗ್ರಾಮದೇವತೆಯನ್ನು ಕರೆಯುತ್ತಿದ್ದು, ಈ ಒಂದು ಗ್ರಾಮದಲ್ಲಿ ಆಚರಿಸುವ ಚೌತವು ಸುತ್ತಮುತ್ತಲಿನ ಸುಗ್ಗಿಹಬ್ಬದ ಚೌತಕ್ಕಿಂತ ವಿಭಿನ್ನವಾಗಿದೆ. ಹಬ್ಬದ ಪ್ರಾರಂಭವನ್ನು 'ಚೌತ' ಎಂದು ಕರೆಯಲ್ಪಟ್ಟರೆ ಇಲ್ಲಿ ಚಪ್ಪಲಿಯನ್ನು ಹಾಕಿಕೊಳ್ಳುವ ಬಗ್ಗೆ ಸಂಪೂರ್ಣ ನಿಷೇಧವಿಲ್ಲ. ಮದ್ಯಪಾನ ನಿಷೇಧವಿಲ್ಲ. ದೇವರನ್ನು ಪೂಜಿಸುವ ಮತ್ತು ಹೊತ್ತು ಮೆರವಣಿಗೆ ಮಾಡುವ ಮನೆಯವರನ್ನು ಬಿಟ್ಟರೆ ಹೆಣ್ಣಿಗೆ ಮುಟ್ಟಿನ ಸಂದರ್ಭದಕ್ಕೆ ಕಠಿಣ ನಿರ್ಬಂಧವಿಲ್ಲ. ಪ್ರತಿ ಹಬ್ಬದಲ್ಲೂ ಯಾವುದೇ ಹೊರಗ್ರಾಮದ ಜನರು ಹಬ್ಬದಲ್ಲಿ ಭಾಗವಹಿಸಬಹುದು. ಹಾಗಾಗಿಯೇ ಈ ಗ್ರಾಮದ ಹಬ್ಬ ಅದ್ದೂರಿಯಾದ ಹಬ್ಬವಾಗಿದೆ. ಹೀಗೇಕೆಂದು ಸ್ಥಳೀಯರನ್ನು ವಿಚಾರಿಸಿದಾಗ ಅದರ ಹಿನ್ನೆಲೆಯನ್ನು ಈ ರೀತಿಯಲ್ಲಿ ವಿವರಿಸಿದ್ದಾರೆ. ಬೇರೆ ಗ್ರಾಮಗಳಂತೆ ಇಲ್ಲಿಯೂ ಕಠಿಣ ಮತ್ತು ಶಿಸ್ತಿನಿಂದಲೇ ಹಬ್ಬ ನಡೆಯುತ್ತಿತ್ತು. ವಿಪರೀತವಾದ ನಿರ್ಬಂಧಗಳಿಂದ ಗ್ರಾಮದವರಲ್ಲಿಯೇ ನಿರಾಸಕ್ತಿ ಮೂಡತೊಡಗಿತ್ತು.ಅದೇ ಸಂದರ್ಭವೆಂಬಂತೆ ಸುಗ್ಗಿ ಹಬ್ಬ ನಡೆಯುತ್ತಿದ್ದಾಗ ದೇವಸ್ಥಾನದ ಸಮೀಪ ಅನತಿ ದೂರದ ಗದ್ದೆಯಲ್ಲಿ ಮರದ ನಾರನ್ನು ತರುವಾಗ ಮದ್ಯಪಾನ ಮಾಡಿದ್ದ ಅವರು ಚೌತದಲ್ಲಿರುವವರಿಗಿಂತ ಚೆನ್ನಾಗಿ ಹಾಗೂ ಸಂತೋಷದಿಂದ ಕುಣಿಯುವುದನ್ನು ಕಂಡ ದೇವಿಯು ಅವರಂತೆ ಸಂತೋಷದಿಂದಲೇ ಹಬ್ಬ ಆಚರಿಸುವಂತೆ ತಿಳಿಸಿತಂತೆ. ಆಗಿನಿಂದ ಈಗಿನವರೆಗೆ ಹಬ್ಬದಲ್ಲಿ ನಾರನ್ನು ಹೊತ್ತು ಕುಣಿಯುವುದು ಒಂದು ಸಂಪ್ರದಾಯವೇ ಆಗಿದೆ. ಹಬ್ಬ ನಡೆಯುವ 11(ಹನ್ನೊಂದು) ದಿನಗಳಲ್ಲಿ ಕೊನೆಯ 04(ನಾಲ್ಕು) ದಿನಗಳು ಮಾಂಸಹಾರದ ದಿನಗಳಾಗಿವೆ. ಈ ವೇಳೆಯಲ್ಲಿ ಹೆಚ್ಚು ಜನರು ಹಬ್ಬಕ್ಕೆ ಆಗಮಿಸುವರು. ವಿಶೇಷವೆಂದರೆ ಈ ನಾಲ್ಕೂ ಗ್ರಾಮಗಳ ಮುಖ್ಯ ದೇವತೆಗೆ ಮಾಂಸದ ಎಡೆ ಇಡುವುದಿಲ್ಲ ಮತ್ತು ಇಡುವಂತೆಯೂ ಇಲ್ಲ. ಈ ಊರಿನ ಹಬ್ಬ ಬಂಧುಗಳನ್ನೆಲ್ಲ ಸೇರಿಸಿ ಮಾಡುವ ಹಬ್ಬವಾಗಿದೆ. ಹೀಗೆ ಅನೇಕ ಸಾಮ್ಯತೆ ಮತ್ತು ಭಿನ್ನತೆಗಳಿಂದ ಕೂಡಿದ ಸುಗ್ಗಿ ಹಬ್ಬವು ಬಡವರ ಪಾಲಿಗೆ ಕಷ್ಟಕರವಾದ ಹಬ್ಬವಾಗಿದೆ. ದೇವತೆಯ ಪರಿಶುದ್ಧತೆಯನ್ನೇ ಅಳೆಯುವ ಕೆಂಡದ ಹಬ್ಬವಂತೂ ಪರೀಕ್ಷೆಯ ಹಬ್ಬವಾಗಿದೆ. ಇಲ್ಲಿ ಏನಾದರೂ ತೊಂದರೆಯಾದರೆ ಊರಿಗೆ ಬರುವ ಅಪಾಯದ ಮುನ್ಸೂಚನೆಯೆಂದೇ ತಿಳಿಯಲಾಗಿದೆ. ಹಾಗಾಗಿಯೇ ಇಂತಹ ಸಂದರ್ಭದಲ್ಲಿ ದಲಿತರಿಗೆ ಕೆಂಡ ಹಾಯುವ ಅವಕಾಶವಿಲ್ಲವೆಂದು ದೇವರೇ ನಿರಾಕರಿಸಿದೆಯೆಂದು ಒಂದು ವೇಳೆ ಕೆಂಡ ಹಾಯುವಾಗ ಏನಾದರು ತೊಂದರೆಯಾದರೆ ದಲಿತರೇಕಾರಣರೆಂದು ಕೆಂಡ ಹಾಯುವುದನ್ನು ನಿರಾಕರಿಸಿರುವುದನ್ನು ಕಾಣಬಹುದು.